ಕುಬೇರಪ್ಪ ಎಂ.ವಿಭೂತಿ, ಹರಿಹರ

*ಇಂದಿನ ಇಪ್ಪತ್ತರ ಯುವಕರು ಎಪ್ಪತ್ತರ ವೃದ್ಧರಂತೆ ವರ್ತಿಸಲು ಕಾರಣವೇನಿರಬಹುದು ಗುರುವೆ?*



ಸ್ಕೂಲ್‌ಬ್ಯಾಗ್ ಹೊತ್ತು ಗೂನು, ಕಂಪ್ಯೂಟರ್ ಕಂಡು ಕನ್ನಡಕ, ಸೀರಿಯಲ್ ಕಂಡು ಸಪ್ಪಗೆ ಆದವರು ಇನ್ನು ಹೇಗಿದ್ದಾರು ಬಿಡಿ!

ನವಿರವಿ, ಬಾಳೆಹೊನ್ನೂರು

*ಪಂಚಮುಖಿ ಆಂಜನೇಯನ ಚಿತ್ರಪಟದಲ್ಲಿ ಒಂದೊಂದು ಮುಖ ಒಂದೊಂದು ಪ್ರಾಣಿಯ ಹಾಗಿದೆ; ಇದರ ಅರ್ಥ?*

ಅವನು ಸೂರ್ಯನಿಗೆ ಐದು ಸಲ ಡಿಕ್ಕಿ ಹೊಡೆದು, ಐದು ವಿವಿಧ ಆಕಾರಗಳಲ್ಲಿ ಮುಖ ಕೆಡಿಸಿಕೊಂಡನೆಂದು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಕುಡಿಯುವ ನೀರಿಗೆ ಕಣ್ಣೀರು ಹಾಕಬೇಕಾಗಿದೆಯಂತೆ?*




ಬೇಡ. ಉಪ್ಪುಪ್ಪಾಗಿಬಿಡುತ್ತದೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಮಳೆಗಾಲದ ಮೋಡವನ್ನು ಕಂಡು ನವಿಲು ನರ್ತನ ಮಾಡುವುದೇಕೆ?*

ಕಡೆಗೂ ಸ್ನಾನ ಮಾಡಲು ನೀರು ಸಿಗುವುದೆಂಬ ಸಂತೋಷ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಪೊಲೀಸರ ಲಾಠಿ ಏಟಿಗೂ, ವಕೀಲರ ಮಾತಿನ ಪೆಟ್ಟಿಗೂ ಇರುವ ವ್ಯತ್ಯಾಸವೇನು?*

ಪೊಲೀಸರ ಪೆಟ್ಟಿನಿಂದ ಕಂಬಿ ಕೀಳುವಂತಾಗುತ್ತದೆ, ವಕೀಲರ ಪೆಟ್ಟಿನಿಂದ ಕಂಬಿ ಎಣಿಸುವಂತಾಗುತ್ತದೆ.

ಗೀತಾ ಬರ್ಲ, ಬೆಂಗಳೂರು

*ಒಂದು ಗಂಡು ಒಂದು ಹೆಣ್ಣು ಮಾತನಾಡುತ್ತಿದ್ದರೆ ಅದಕ್ಕೆ ನೂರು ಅರ್ಥ ಕಲ್ಪಿಸಿ ಕಥೆ ಕಟ್ಟಿ ಹೇಳುವವರಿಗೆ ಏನೆನ್ನಬೇಕು?*

ಸೀರಿಯಲ್ ಡೈರೆಕ್ಟರ್!

ಎ.ಪಿ. ರೇಣುಕಾ, ಮೈಸೂರು

ರಾಜಕಾರಣಿಗಳು ಕಿತ್ತಾಡಿ ಒಂದಾಗುತ್ತಾರೆ; ಕಾರ್ಯಕರ್ತರು ಕಿತ್ತಾಡಿ ದೂರ ದೂರ ಆಗುತ್ತಾರಲ್ಲಾ...?

ಪ್ರಕೃತಿನಿಯಮ; ಆನೆಗಳು ಸೆಣಸಿದಾಗ ಹಾಳಾಗುವುದು ಆನೆಗಳಲ್ಲ, ಹುಲ್ಲು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ನಿಂತಿರುವಾಗ ನಮ್ಮ ಕಾಲ ಕೆಳಗೆ ಮಣ್ಣು, ಗುಣಿಯಲ್ಲಿ ಮಲಗಿದಾಗ ನಮ್ಮ ಮೇಲೆ ಮಣ್ಣು. ಮಾನವ ಮಣ್ಣನ್ನು ಬಿಡದಿರುವುದರ ಉದ್ದೇಶ ಏನು?*

ಉಳುವುದಕ್ಕೂ, ಹೂಳುವುದಕ್ಕೂ ಅದೊಂದೇ ಪ್ರಶಸ್ತವಾದ್ದರಿಂದ!

ಆರಿಫ್, ದಾವಣಗೆರೆ

*ಕುಳ್ಳಗಿರುವ ಹುಡುಗಿಯರು ಹೆಚ್ಚಾಗಿ ಎತ್ತರದ ಸ್ಲಿಪ್ಪರ್‌ಗಳನ್ನು ಹಾಕುತ್ತಾರಲ್ಲಾ, ಏಕೆ?*

ಚುಡಾಯಿಸಿದವರ ಕಾಲರ್, ಮೀಸೆ ಜಗ್ಗಿ ಬುದ್ಧಿ ಕಲಿಸಲು ಆ ಎತ್ತರ ಬೇಕಂತೆ!

ಅಮರಯ್ಯ, ಕಬಾಡಗೇರಾ

*ಕಾಂಚಾಣ ಭಗವಂತನ ಎಷ್ಟನೆಯ ಅವತಾರ?*

ಕಾಂಚಾಣ ಅವತಾರವಲ್ಲ; ಸಾಕು ನಿಲ್ಲಿಸಿ ನಿಮ್ಮ ಅವತಾರಗಳನ್ನ ಎಂದು ದೇವನನ್ನು ಗದರಿಸುವ ದೇವಪತ್ನಿ ಉರುಫ್ ಲಕ್ಷ್ಮಿ.

ಎನ್. ವಸಂತಾ, ಕತ್ತರಗುಪ್ಪ

*ಗೆಳತಿಯೊಬ್ಬಳು ತನ್ನ ಮಗನಿಗೆ ಅಪರೂಪ ಎಂದೂ, ಮಗಳಿಗೆ ಅನಾಹುತ ಎಂದೂ ಹೆಸರಿಟ್ಟಿರುವಳಲ್ಲಾ...?*

ಸತಿಪತಿಯರ ಕುರುಹಂತೆ; ಮಗನ ಹೆಸರು ಅಪರೂಪ ಅಲ್ಲ, ಅಪ್ಪರೂಪ ; ತಾಯಿಯಂತೆ ಮಗಳಾದ್ದರಿಂದ ಅನಾಹುತ !

## ಬಹುಮಾನಿತ ಪ್ರಶ್ನೆ

ಲ್ಯಾಂಡ್ ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು

*ಬೆಂಕಿಯಿಲ್ಲದ ಒಲೆ, ಮೀನಿಲ್ಲದ ಬಲೆ, ಬುದ್ಧಿಯಿಲ್ಲದ ತಲೆ ಇವುಗಳನ್ನು ಯಾವುದಕ್ಕೆ ಹೋಲಿಸಬಹುದು?*

ಪವರ್‌ನಲ್ಲಿದ್ದರೂ ಪವರ್ ಇಲ್ಲದೆ ಪವರ್ ಕಟ್ ಮಾಡುವ ಪವರ್ ಮಿನಿಸ್ಟರ್‌ಗೆ!

ಕೇಶವ ಎನ್. ಪೈ, ಕಾಸರಕೋಡ

*ವೈದ್ಯ ದೇವೋ ಭವ ಎನ್ನುವುದು ಏಕೆ?*

ಎಲೈ ವೈದ್ಯನೇ, ನೀನು ದೇವನಂತಿರುವುದು ಎಂದರೆ ಕಣ್ಣಿಗೆ ಬೀಳದೆ ದೂರವೇ ಇರುವುದು ನಮಗೆ ಕ್ಷೇಮ ಎಂದರ್ಥವಂತೆ!

ವಿರಾಜ್, ಅಡೂರು

*ಸರಳತೆ ರಿಯಾಲಿಟಿ, ಉತ್ಕೃಷ್ಟ ಸ್ಪೆಷಾಲಿಟಿ. ಸಮನ್ವಯತೆ?*

ಹೊಂದಿದರೆ ಟೂಟಿಫ್ರೂಟಿ, ಹೊಂದದಿದ್ದರೆ ಲಟಾಪಟಿ!

ವಿ.ಹೇಮಂತಕುಮಾರ, ಬೆಂಗಳೂರು

*ಕೆಲವರು ನಿದ್ರೆ ಮಾಡುವಾಗಲೂ ಕನ್ನಡಕ ಧರಿಸುತ್ತಾರಲ್ಲಾ...?*



ಕನ್ನಡಕಕ್ಕೆ ಇನ್ಸೂರೆನ್ಸ್ ಮಾಡಿಸಿರುವುದಿಲ್ಲವಲ್ಲ, ಎಲ್ಲೋ ಇಟ್ಟರೆ ಕಳ್ಳ ಕದ್ದುಬಿಟ್ಟಾನೆಂಬ ಭಯ!

ರತ್ನಾ ಅಶೋಕ, ಗೊರವರ

*ವಿದ್ಯೆಯುಳ್ಳವನು ಸರಸ್ವತಿಪುತ್ರ, ಹಣವುಳ್ಳವನು ಲಕ್ಷ್ಮೀಪುತ್ರ. ಪಾರ್ವತಿ ಪುತ್ರರು ಯಾರು?*

ಮನೆಯವರೊಡನೆಯೇ ಜಗಳ ಆಡಿ ತಲೆ ಹೋಗುವಂತಹ ಕೆಲಸ ಮಾಡಿಕೊಳ್ಳುವವರು!

ಜಾಕೋಬ್ ಡಿಸೋಜ, ಕುರುವಳ್ಳಿ

*ಶುದ್ಧ ಗುಗ್ಗು ಅಂದ್ರೆ ಯಾರು?*

ಹೊಸ ನಟರನ್ನು ಹಾಕಿಕೊಂಡು ಕನ್ನಡ ಚಿತ್ರ ತೆಗೆಯುವ ನಿರ್ಮಾಪಕ!

ಎನ್.ಎಸ್. ಆನಂದ್, ಬೆಂಗಳೂರು

*ತಲೆಕೂದಲು ಬೆಳ್ಳಗಾಯಿತೆಂದು ಬಣ್ಣ ಹಚ್ಚಿಕೊಳ್ಳುವ ಹುಡುಗನೊಬ್ಬ ಹುಡುಗಿ ಕಪ್ಪೆಂದು ಮುಖ ಕಿವುಚಿಕೊಳ್ಳುವುದೇಕೆ?*

ಕಪ್ಪು ಮುಖಕ್ಕೆ ಕಿವುಚಿಕೊಂಡ ಮುಖವೇ ಮ್ಯಾಚಿಂಗ್ ಅಂತೆ!

■ ರಾಮ್